## ದೌರ್ಜನ್ಯ ಎಂಬ ಅಟ್ಟಹಾಸ

ಲೈಂಗಿಕ ದೌರ್ಜನ್ಯವೆಂದರೆ ಲೈಂಗಿಕತೆಯ ಕೊರತೆಯಿಂದ ಆಗುವ ಪರಿಣಾಮ ಎನ್ನುವ ತಪ್ಪು ಭಾವನೆ ಇದೆ. ಆಪ್ತ ಸಮಾಲೋಚಕಿ ಆರತಿ ಲೆಂಗಡೆ ಹೇಳುವಂತೆ, ಇದು ದೈಹಿಕ ಕೊರತೆ ಎನ್ನುವುದು ಅರ್ಧ ಸತ್ಯ. "ಅತ್ಯಾಚಾರ ಅಥವಾ ದೌರ್ಜನ್ಯ ಎಸಗುವವರು ನಮ್ಮ ನಿಮ್ಮ ನಡುವೆ ಇರಬಹುದಾದ, ನಾರ್ಮಲ್ ಎನ್ನಿಸಬಹುದಾದ ಮಾನಸಿಕ ರೋಗಿಗಳು. ಅವರಿಗಾದ ಕೆಟ್ಟ ಅನುಭವವೋ ಅಥವಾ ಮನೆಯಲ್ಲಿ ಕಂಡ ದೌರ್ಜನ್ಯದ ಮಾದರಿಯೋ ಅಥವಾ ತನ್ನ ಅಧಿಕಾರವನ್ನು ಸ್ಥಾಪಿಸುವ ಛಲವೋ ಕೆಲಸ ಮಾಡುತ್ತಿರುತ್ತದೆ. ಅದು ಕಂಡಕಂಡವರನ್ನು (ಗಂಡಸು–ಹೆಂಗಸು––ಭಿನ್ನ ಲಿಂಗಿ) ಅವಕಾಶದಂತೆ ನೋಡುವ ಹಾಗೆ ಪ್ರೇರೇಪಿಸುತ್ತದೆ. ಇದು ಅಧಿಕಾರದಿಂದ ಹುಟ್ಟುವ ಹಿಂಸಾ–ವಿನೋದಿ ಮದ.

ಪ್ರತಿಭಟಿಸುವವರು ಕಡಿಮೆ ಆದಂತೆ, ಇದಕ್ಕೆ ಸಿಗುವ ಶಿಕ್ಷೆ ಇಲ್ಲವಾಗುತ್ತಾ ಹೋದಂತೆ ಮನುಷ್ಯ ತಾನು ತಪ್ಪು ಮಾಡುತ್ತಿರಬಹುದು ಎನ್ನುವ ಕನಿಷ್ಠ ಎಚ್ಚರವನ್ನೂ ಕಳೆದುಕೊಳ್ಳುತ್ತಾ ಹೋಗುತ್ತಾನೆ. ಇದರಲ್ಲಿ ಅವರಿಗೆ ಆನಂದ, ಸಮಾಧಾನ ಯಾವುದೂ ಸಿಗುವುದಿಲ್ಲ. ಸಿಗುವುದಕ್ಕಿಂತ ಆತ/ಆಕೆ ಕಳೆದುಕೊಳ್ಳುವುದೇ ಹೆಚ್ಚು. ಅವರು ಯಾವ ಸಂಬಂಧಕ್ಕೂ ಪ್ರಾಮಾಣಿಕರಾಗಿ ಇರಲು ಸಾಧ್ಯವಾಗದೇ ಹೋಗಬಹುದು. ಈ ಎಲ್ಲದರ ಪರಿಣಾಮವಾಗಿ ಅವರು ಮತ್ತೆ ಮತ್ತೆ ಇದೇ ಕೆಲಸ ಮಾಡುತ್ತಾರೆ. ಒಮ್ಮೆ ಸಿಕ್ಕಿಬಿದ್ದರಂತೂ ಮುಂದೆ ಯಾವ ಎಗ್ಗಿಲ್ಲದೆ ಮುಂದುವರೆಯುತ್ತಾರೆ. ಇದಕ್ಕೆ ಚಿಕಿತ್ಸೆ ಹಾಗೂ ಸಾಮಾಜಿಕ ಛೀಮಾರಿ ಎರಡೂ ಬೇಕು.

ಆದರೆ ಈಗ ಆಗುತ್ತಿರುವುದು ಪೂರ್ತಿ ಉಲ್ಟಾ ಪ್ರಕ್ರಿಯೆ. ದೌರ್ಜನ್ಯ ಮಾಡುವವರನ್ನು ಬಿಟ್ಟು ನಾವು ದೌರ್ಜನ್ಯಕ್ಕೆ ಒಳಗಾದವರ ಕಡೆ ಬೆಟ್ಟು ಮಾಡಿ ಅವರನ್ನು ಅನುಮಾನಿಸುತ್ತಿದ್ದೇವೆ. ಹಾಗೊಂದು ಪಕ್ಷ ಕೆಲವು ಸುಳ್ಳು ಆಪಾದನೆಗಳಿದ್ದರೂ ಎಲ್ಲವನ್ನೂ ತನಿಖೆಯ ಮೂಲಕವೇ ಬಗೆಹರಿಸಿ ಸುಳ್ಳು ದೂರು ಕೊಟ್ಟವರಿಗೆ (ಪುರುಷ ಅಥವಾ ಮಹಿಳೆ ಯಾರೇ ಆಗಲಿ) ಶಿಕ್ಷೆಯಾಗುವ ಹಾಗೆ ಕಾನೂನು ಲಿಂಗನಿರಪೇಕ್ಷಿಯಾದರೆ ಮುಂದಿನ ಪೀಳಿಗೆಗಳಿಗೆ ಸಹಾಯವಾದೀತು.

ಯಾಕೆ ಹೀಗೆ ಆಗುತ್ತದೆ ಎಂದು ಸಾಮಾಜಿಕವಾಗಿ ನೋಡಿದರೆ, ಹೆಣ್ಣುಮಕ್ಕಳು ಇತ್ತೀಚಿನವರೆಗೂ ಸಾಮಾಜಿಕ ಸ್ಥಾನಮಾನಗಳನ್ನು ಹಕ್ಕಿನಿಂದ ಹೊಂದದೆ ಹೋಗಿರುವುದೇ ಇದಕ್ಕೆ ಕಾರಣ ಎಂದು ಪಾಶ್ಚಾತ್ಯ ಮನಃಶಾಸ್ತ್ರಜ್ಞರು ಹೇಳುತ್ತಾರೆ. "ಹೊಸ ಪೀಳಿಗೆಯ ಕಚೇರಿಗಳನ್ನು ಬಿಟ್ಟರೆ ಉಳಿದೆಲ್ಲ ಆಫೀಸುಗಳೂ ಪುರುಷರಿಗೆ ಮಾತ್ರ ಮಾಡಿದಂಥವು. ಹೆಣ್ಣುಮಕ್ಕಳು ಹೆಚ್ಚೆಂದರೆ ಮೊದಲನೇ ಅಥವಾ ಎರಡನೇ ಪೀಳಿಗೆಗೆ ಕೆಲಸ ಮಾಡಲು ಹೊರಟಿದ್ದಾರೆ. ಗಂಡಸರು ತಲೆಮಾರುಗಳಿಂದ ಈ ಜಾಗಗಳಲ್ಲಿ ಕೂತಿದ್ದಾರೆ. ಹಾಗಾಗಿ ಹೆಣ್ಣುಮಕ್ಕಳು ಆ ಜಾಗಗಳಿಗೆ ಬಂದಾಗ ಸಹಜವಾಗಿಯೇ ಸ್ಪರ್ಧೆ ಏರ್ಪಟ್ಟು ಸಾಮಾಜಿಕ ಕಟ್ಟುಪಾಡುಗಳು ಇಂಬು ಕೊಡುತ್ತವೆ. ಹೆಣ್ಣಿನ ಮೇಲೆ ಗಂಡು ಮಾಡುವ ದೌರ್ಜನ್ಯ ಒಂದು ಒಪ್ಪಿತ ಚೌಕಟ್ಟಾದ್ದರಿಂದ ಅದೇ ವಿನ್ಯಾಸ ಇಲ್ಲೂ ಮುಂದುವರೆಯುತ್ತದೆ.

ಸಾಮಾಜಿಕವಾಗಿಯೂ ಎಲ್ಲ ಸಂಸ್ಕೃತಿಗಳು ಹೆಣ್ಣುಮಕ್ಕಳನ್ನು ಅತ್ಯಂತ ವಿಶ್ವಾಸದಿಂದ ನಡೆಸಿಕೊಂಡಿಲ್ಲ. ಮುಂದುವರೆದ ಪಾಶ್ಚಾತ್ಯ ದೇಶಗಳಲ್ಲೂ ಹೆಣ್ಣುಮಕ್ಕಳಿಗೆ ಹೊರಹೋಗುವ, ವೋಟು ಹಾಕುವ ಹಕ್ಕು ಸಿಕ್ಕಿದ್ದು ಇಪ್ಪತ್ತನೇ ಶತಮಾನದಲ್ಲಿ ಮಾತ್ರ. ಹಾಗಾಗಿ ಎಲ್ಲಾ ಬದಲಾವಣೆಗಳೂ ಕಾಲಾಂತರದಲ್ಲಿ ಆಗಿಯೇ ಆಗುತ್ತವೆ. ಯಾಕೆಂದರೆ ಎಲ್ಲ ದೇಶಗಳ ಪ್ರಗತಿಗೆ ಹೆಣ್ಣುಮಕ್ಕಳು ಸಮಾನ ಬಾಧ್ಯಸ್ಥರಾಗಿದ್ದಾರೆ. ಸಬಲ ಹೆಣ್ಣು ಸಮುದಾಯದಿಂದ ಆರ್ಥಿಕತೆಗೆ ಹೆಚ್ಚು ಲಾಭವಿದೆ. ಮುಕ್ತ ಶಿಕ್ಷಣ ಇದನ್ನು ಎಲ್ಲಾ ದೇಶಗಳಲ್ಲೂ ಸಾಧ್ಯವಾಗಿಸುತ್ತಿರುವುದನ್ನು ನಾವು ನೋಡಬಹುದು. ಇದು ಅನಿವಾರ್ಯ ಹಾಗೂ ಅತ್ಯಂತ ಸೂಕ್ತ ಬದಲಾವಣೆ... ನಮ್ಮ ಭವಿಷ್ಯದ ಹಕ್ಕು ಇದು..." ಎನ್ನುತ್ತಾರೆ ಆರತಿ.

ಇದೊಂದು ಥರ ಯಾವ ತಂತುವಿಲ್ಲದೆ ಸಹಾಯಹಸ್ತ ಚಾಚುತ್ತಾ 'ಬೆಂಬಲ ಬಳಗ' ಹೊಂದಿದ ಹಾಗೆ. ಇದರ ಪರಿಣಾಮ ಪಾಸಿಟಿವ್ ಆಗಬಹುದು ಎಂದು ನಿರೀಕ್ಷಿಸುವವರಿದ್ದಾರೆ. 'ಈ ಆಂದೋಲನದ ಕಾರಣದಿಂದಾಗಿ ಹೆಣ್ಣುಮಕ್ಕಳು ಒಬ್ಬರಿಗೊಬ್ಬರು ಬೆಂಬಲ ನೀಡುವುದು ಹೆಚ್ಚಾಗಬಹುದು' ಎನ್ನುವುದು ಮಾನಸಿಕ ತಜ್ಞೆ ಡಾ. ಮರುದಂ ಅಭಿಪ್ರಾಯ. ಎಲ್ಲರೂ ಕೆಲಸ ಮಾಡುವ ಕಚೇರಿಗಳಲ್ಲಿ ಹೆಣ್ಣುಮಕ್ಕಳನ್ನು ಒಳಗೊಳ್ಳುವ ಪ್ರಕ್ರಿಯೆಗಳು ಹೆಚ್ಚು ಲಿಂಗ–ಸ್ನೇಹಿಯಾಗಿ ಮಾರ್ಪಾಟು ಆಗಬಹುದು. ವಕೀಲೆ ಮಾನಸಾ ಹೇಳುವಂತೆ, ಯಾವ ವಾತಾವರಣದಲ್ಲಿ ದುಗುಡ ಕಮ್ಮಿಯೋ ಅಲ್ಲಿ ದೂರುಗಳೂ ಕಮ್ಮಿ ಆಗಬಹುದು. "ಹೆಣ್ಣುಮಕ್ಕಳಿಗೆ ಹೆಚ್ಚು ಹೆಚ್ಚು ಪೂರಕ ವಾತಾವರಣ ಸಿಕ್ಕ ಹಾಗೆ ಅವರ ದುಡಿಯುವ ಕ್ಷಮತೆ ಕೂಡ ಹೆಚ್ಚಾಗುತ್ತದೆ. ಅವರನ್ನು ಒಳಗೊಳ್ಳಲು ನಾವು ಇಲ್ಲಿಯವರೆಗೂ ಮಾಡಿದ ಪ್ರಯತ್ನಗಳಿಗಿಂತ ಭಿನ್ನ ಪ್ರಯತ್ನ ಮಾಡಬೇಕಾಗಿದೆ" ಎನ್ನುತ್ತಾರೆ.



'ಕ್ವೀನ್' ಚಿತ್ರದ ನಿರ್ದೇಶಕನ ವಿರುದ್ಧ ಕಿಡಿ ಕಾರಿರುವ ಕಂಗನಾ ರನೋವತ್

ಆದರೆ ಇಂಥದೊಂದು ಪ್ರಯತ್ನದ ಮಾರಕ ಪರಿಣಾಮಗಳನ್ನೂ ಅಲ್ಲಗಳೆಯಲಾಗದು. ಇದರಿಂದ ಹೆಣ್ಣುಮಕ್ಕಳಿಗೆ ಅವಕಾಶ ಸಿಗುವುದು ಕಡಿಮೆ ಆಗಬಹುದೇ?

"ಆಗಬಹುದು ಆಗದೆಯೂ ಇರಬಹುದು... ಇದಿನ್ನೂ ಮೊನ್ನೆ ತಾನೇ ತಾನಾಗಿ ಹುಟ್ಟಿದ ಕೂಸು. ಅದನ್ನು ಈಗಲೇ ವಿಶ್ಲೇಷಣೆ ಮಾಡುವುದು ಬೇಡ" ಎನ್ನುತ್ತಾರೆ ಪತ್ರಕರ್ತೆ ಸಂಧ್ಯಾ ಮೆನನ್. ಇವರು ತಮ್ಮ ಮೇಲೆ ದೌರ್ಜನ್ಯ ಮಾಡಿದ ಸಂಪಾದಕರ ಬಗ್ಗೆ ತಮ್ಮ ಸಂಸ್ಥೆಯಲ್ಲಿ ವರ್ಷಗಳ ಹಿಂದೆಯೇ ದೂರು ನೀಡಿ ನಂತರ ಅವರ ಹೆಸರನ್ನು ಟ್ವಿಟರ್‌ನಲ್ಲಿ ಬಹಿರಂಗಪಡಿಸಿದ್ದರು. ಇವರನ್ನು ಬೆಂಬಲಿಸಿ ಸಾಕಷ್ಟು ಜನ ತಮ್ಮ ನೋವಿನ ಅನುಭವಗಳನ್ನೂ ಹೇಳಿಕೊಂಡಿದ್ದರು.

ಈ ವಿಷಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಹಲವರ ಕಾಳಜಿ ಒಂದೇ ಆಗಿದೆ.